ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪೂರ್ವ) ವಲಯ

ವಾರ್ಡ್ ಸಂ ಖ್ಯೆ:62 ರಾಮಸ್ವಾಮಿಪಾಳ್ಯ ವಾರ್ಡಿನಲ್ಲಿ ದಿನಾಂಕ:05-12-2020 ರಂದು ನಡೆದ ಸಭೆಯ ನಡವಳಿಗಳು

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ:21-09-2020 ರ ಆದೇಶದಂತೆ ದಿನಾಂಕ:05-12-2020 ರಂದು ವಾರ್ಡ್ ಸಂಖ್ಯೆ:62 ರಾಮಸ್ವಾಮಿಪಾಳ್ಯ-(ಜಯಮಹಲ್ ಪಾರ್ಕ) ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

<u>ಸಭೆಗೆ ಹಾಜರಿದ್ದವರು</u>

| ಕ್ರಮ ಸಂಖ್ಯೆ | ಹೆಸರು | ಸಮಿತಿ ಸಭೆಯ |
|---|---|---|
| 1 | ಶ್ರೀ. ಎಸ್.ಉಮೇಶ್ | ಅಧ್ಯಕ್ಷರು /ನೋಡಲ್ ಅಧಿಕಾರಿ ಕಂದಾಯ ಅಧಿಕಾರಿ (ಶಾಂತಿನಗರ) |
| 2 | ಶ್ರೀ.ಹಿಂದಾ ವೀರೇಶ | ಕಾರ್ಯದರ್ಶಿ ಸಹಾಯಕ ಅಭಿಯಂತರರು |
| 3 | ಶ್ರೀ ಸೀತಾರಾಮ್ | ಸದಸ್ಯರು . (ಮೌಲ್ಯ ಮಾಪಕರು ವಾರ್ಡ್ ಸಂಖ್ಯೆ:62) |
| 4 | ಶ್ರೀಮತಿ.ಜಗದಾಂಭ | ಜೆ.ಸಿ. ನಗರ ಪೊಲೀಸ್ ಠಾಣೆ |
| 5 | ಶ್ರೀ.ಶಿವಪ್ರಕಾಶ್ | ಜೆ.ಸಿ. ನಗರ ಪೊಲೀಸ್ ಠಾಣೆ |
| 6 | ಶ್ರೀ.ಪ್ರಶಾಂತ ನಾಯಕ | ಕಿರಿಯ ಆರೋಗ್ಯ ನಿರೀಕ್ಷಕ |
| 7 | ಶ್ರೀ.ಅನಿಲ್‌ಕುಮಾರ್ | ಕಂದಾಯ ಪರಿವೀಕ್ಷಕರು |
| 8 | ಶ್ರೀ ಮೂರ್ತಿ | ಸದಸ್ಯರು BWSSB (A.E) |
| 9 | ಶ್ರೀಮತಿ.ಅನುಸುಯಾ. ಕೆ | ಸದಸ್ಯರು Link Worker |
| 10 | ಶ್ರೀಮತಿ.ಜಯಮ್ಮಾ.ಟಿ | ಸದಸ್ಯರು Link Worker |
| 11 | ಶ್ರೀಮತಿ.ಸುಧಾಮಣಿ | ಸದಸ್ಯರು |
| 12 | ಶ್ರೀಮತಿ.ಆರ್. ಮಹೇಶ್ವರಿ | ಸದಸ್ಯರು |

ದಿನಾಂಕ:05-12-2020 ರಂದು ಮಧ್ಯಾಹ್ನ 3.00 ಗಂಟೆಗೆ ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ, ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರಿಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆ ಪ್ರಾರಂಭಗೊಳಿಸಿ ಹಿಂದಿನ ಸಭೇಯಲ್ಲಿ ನಡೆದ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

1. ವಾರ್ಡ್ 62 ರ ಟೈಲರಿಂಗ್ ಕೇಂದ್ರಕ್ಕೆ ವಿದ್ಯುತ್ ಹಾಗೂ ನೀರಿನ ವ್ಯಾವಸ್ಥೆ ಒದಗಿಸುವ ಬಗ್ಗೆ.

Scanned with CamScanner

Scanned with CamScanner

ಕ್ರಮ :- AEE ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸುಚಿಸಲಾಯಿತು.

2. ವಾರ್ಡ್ 63 ರ ಟೈಲರಿಂಗ್ ಕೇಂದ್ರದಲ್ಲಿ ನಡೆಸುತ್ತಿರುವ ವಾರ್ಡ ಕಮಿಟಿ ಸಭೇ ನಡೆಸುವ ಕಟ್ಟಡಕ್ಕೆ ದುರಸ್ತಿ ಮಾಡುವ ಬಗ್ಗೆ.

ಕ್ರಮ :- AEE ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

3. ವಾರ್ಡ್ ಸಂಖ್ಯೆ:62 ರಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಒಂದು ಶೌಚಾಲಯ ಇರುವುದರಿಂದ ಹೆಚ್ಚಿನ ಶೌಚಾಲಯಗಳ್ಳು ನಿರ್ಮಿಸಲು ಸ್ಥಳೀಯ ಸಾರ್ವಜನಿಕರಿಂದ ಮುಂದಿನ ಸಭೆಯಲ್ಲಿ ಸ್ಥಳದ ವಿವರಣೆಯನ್ನು ನೀಡಲು ತಿಳಿಸಿದರು. ವಾರ್ಡ್‌ನಲ್ಲಿ ಪಾದಚಾರಿ ಮಾರ್ಗದ ದುರಸ್ಥಿ ಹಾಗೂ ಎಲ್ಲಿ ಪಾದಚಾರಿ ಮಾರ್ಗ ನಿರ್ಮಿಸಬಹುದು ಅಲ್ಲಿಯ ವಿವರಣೆ ನೀಡಲು ಸೂಚಿಸಿದರು.

ಕ್ರಮ:- AEE(SWM) & AEE ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸುಚಿಸಲಾಯಿತು.

4. ವಾರ್ಡ್ ಸಂಖ್ಯೆ:62 ರಲ್ಲಿ ಕಾರ್ಯನಿರ್ವಹಿಸುತ್ತಿರುವ ಕಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಮಾರ್ಷಲ್ ರವರಿಗೆ ದಂಡ ವಸೂಲಾತಿಯನ್ನು ಹೆಚ್ಚಿಗೆಗೊಳಿಸಲು ಸೂಚಿಸಿದರು.

ಕ್ರಮ :- AEE(SWM) ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸುಚಿಸಲಾಯಿತು.

5. ಕೋವಿಡ-19 ವಾರ್ಡ್ ಸಂಖ್ಯೆ:62ರಲ್ಲಿ ದಿನಕ್ಕೆ 300 ಟೆಸ್ಟಿಂಗ್ (RTPCR) ನಡೆಸಲಾಗುತ್ತಿದ್ದು, ಅದರಲ್ಲಿ ಸರಾಸರಿ 5 ರಿಂದ 10 ಪಾಜಿಟೀವ್ ಪ್ರಕರಣಗಳು ಬರುತ್ತಿರುತ್ತವೆ. 300ಕ್ಕಿಂತ ಹೆಚ್ಚಿನ ಟೆಸ್ಟಿಂಗ್ ಮಾಡಲು ತಿಳಿಸಿರುತ್ತಾರೆ.

ಕ್ರಮ :- MOH(SJN) ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸುಚಿಸಲಾಯಿತು.

6. ವಾರ್ಡ್ ಸಂಖ್ಯೆ:62ರಲ್ಲಿ ಬೀದಿ ನಾಯಿಗಳು ಹೆಚ್ಚಾಗಿರುವುದರಿಂದ ಪಶುಸಂಗೋಪನೆ (Animal husbandry) ರವರಿಗೆ ಮಾಹಿತಿ ನೀಡಲು ಸೂಚಿಸಿದರು.

ಕ್ರಮ :- (JHI) ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸುಚಿಸಲಾಯಿತು.

7. ವಾರ್ಡ್ ಸಂಖ್ಯೆ:62 ರಲ್ಲಿ ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆಯನ್ನು ತಡೆಗಟ್ಟುವ ಸಲುವಾಗಿ ಟ್ರಾಫಿಂಕ್ ಪೋಲೀಸ್ ರವರಿಗೆ ತಿಳಿಸಲು ಸೂಚಿಸಿದರು.

ಕ್ರಮ :- ಟ್ರಾಫಿಕ್ ಪೋಲೀಸ್ ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸುಚಿಸಲಾಯಿತು.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯವನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಿಸಿದ ಅಧಿಕಾರಿಗಳು ಕೈಗೊಂಡ ಕ್ರಮದ ಬಗ್ಗೆ ವರದಿ ಪೂರ್ಣಗೊಂಡಿರುವ ಬಗ್ಗೆ ಸಭೆಯಲ್ಲಿ ತಿಳಿಸುವುದು. ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಹಿಂದಾ ವೀರೇಶ ಸಹಾಯಕ ಅಭಿಯಂತರರು ಮಧ್ಯಾಹ್ನ 4.00 ವರೆಗೆ ಸಭೆ ಮುಕ್ತಾಯಗೊಳಿಸಲಾಯಿತು.

05/12/2020.

ವಾರ್ಡ್ ಕಾರ್ಯದರ್ಶಿ
ಸಹಾಯಕ ಅಭಿಯಂತರರು

5/12/2020

ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ 62 (ರಾಮಸ್ವಾಮಿಪಾಳ್ಯ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with CamScanner

Scanned with CamScanner

ಪ್ರತಿಗಳನ್ನು:

1) ಮಾನ್ಯ ಆಡಳಿತಗಾರರ ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ.
2) ಮಾನ್ಯ ಆಯುಕ್ತರು ರವರ ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ
3) ಮಾನ್ಯ ವಿಶೇಷ ಆಯುಕ್ತರು (ಆಡಳಿತ) ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಿದೆ.
4) ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಕಳುಹಿಸಲಾಗಿದೆ
5) ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗೆ ಕಳುಹಿಸಲಾಗಿದೆ
6) ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ) ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
7) ಸಹಾಯಕ ಕಾರ್ಯಪಾಲಕ ಅಭಿಯಂತರರು (ವಸಂತನಗರ ) ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8) ಆರೋಗ್ಯ ವೈದ್ಯಾಧಿಕಾರಿ (ಶಿವಾಜಿನಗರ) ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9) ಸಹಾಯಕ ಕಂದಾಯ ಅಧಿಕಾರಿ (ವಸಂತನಗರ) ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10) ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೀದಿ ದೀಪ ಪೂರ್ವ) ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11) ಸಮಿತಿಯ ಎಲ್ಲಾ ಸದಸ್ಯರ ಅವಗಾಹನೆಗೆ ಕಳುಹಿಸಲಾಗಿದೆ.
12) ಕಛೇರಿ ಕಡತಕ್ಕೆ.

Scanned with CamScanner

Scanned with CamScanner